ಪ್ರೊ. ಎಚ್.ಟಿ. ಪೋತೆ ಕಥೆ, ಕಾದಂಬರಿ ಮತ್ತು ಅನುವಾದ ಕ್ಷೇತ್ರದಲ್ಲಿ ಆಸಕ್ತರು. ಇಂಡಿ ತಾಲ್ಲೂಕಿನ ಹಂಜಗಿ ಗ್ರಾಮದವರು. ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು. 'ಚಮ್ಮಾವುಗೆ', 'ಬೆತ್ತಲಾದ ಚಂದ್ರ', 'ಮಹಾಬಿಂದು', 'ಅಂಬೇಡ್ಕರ್ ಭಾರತ' 'ಬಯಲೆಂಬೊ ಬಯಲು...', 'ಅನೇಕಲವ್ಯ', 'ಜಾನಪದ ಜ್ಞಾನವಿಜ್ಞಾನ' ಹಾಗೂ 'ಗಾಂಧಿ ಪ್ರತಿಮೆ' ಅವರ ಪ್ರಮುಖ ಕೃತಿಗಳು.

ನೀನು' ಎಂದು ಅಂಬವ್ವ ತನ್ನತ್ತಿಯನ್ನು ನೆನೆದಳು.

'ಏನಮ್ಮ ನೀನು, ಗುಣಾ ಅಜ್ಜಿಯದು ಮೈಮಾಟ ನಿಮ್ಮಜ್ಜನದು ಎಂದು ಹೇಳಲಿಲ್ಲ' ಎಂದ ಪ್ರಕಾಶ ನಗುತ್ತ ಕೇಳಿದ.

'ಏನದು ಅವ್ವ-ಮಗನ ಮಾತುಕತಿ' ಎನ್ನುತ್ತ ತಿಪ್ಪಣ್ಣ ಒಳಬಂದ. ಮಗಾ ಪ್ರಕಾಶ ಎದುರುಗೊಂಡು ಅಪ್ಪನ ಪಾದ ಮುಟ್ಟಿ ನಮಸ್ಕರಿಸಿದ. 'ನೋಡಪಾ ನನ್ನೆತ್ತರಕ-ಬೆಳದಿದಿಯಾ. ಇದೆಲ್ಲ ಬೇಕಾ? ಎಂದು ಅಪ್ಪಿಕೊಂಡು ಅಲಾಬಲಾ ತಗೊಂಡರ ಸಾಕಪಾ' ಎನ್ನುತ್ತ ಪರಸ್ಪರ ಮುದ್ದಾಡಿದರು. ಒಲಿ ಮುಂದ ಕೂತಿದ್ದ ಅಂಬವ್ವ ತಂದಿ ಮಗನ ಪ್ರೀತಿ ನೋಡಿ ಕಣ್ಣು ಒದ್ದೆ ಮಾಡಿಕೊಂಡಳು.

'ನೀವೂ ಕೈಕಾಲು ತೋಳಕೊಂಡ್ರೇನು?' ಎಂದು ಅಂಬವ್ವ ಕೇಳಿದಳು.

'ಹೌದು' ಎಂದು ತಿಪ್ಪಣ್ಣ ಉತ್ತರಿಸಿದ.

'ಹಂಗಿದ್ರ ಊಟಾ ಮಾಡ್ರಿ ತಡಾ ಆಗ್ತದ.'

'ಇಷ್ಟ ಅವಸರೇನದ' ಎಂದು ಮಗ ಪ್ರಕಾಶ ಕೇಳಿದ.

'ನಡೀಪಾ, ನಿಮ್ಮವ್ವ ಇನ್ನೂ ಉಂಡಿರಲಿಕ್ಕಿಲ್ಲ ನಾನು ನ್ಯಾರಿ ಮಾಡಿನಿ, ನಮ್ಮಿಬ್ಬರ ಊಟ ಆದ ಮ್ಯಾಲ ಉಣತಾಳ' ಎಂದು ಊಟಕ್ಕ ಕೂತರು. ತಂದೆ ಮಗ ಶಾವಿಗೆ ಹಾಲುತುಪ್ಪ ಚಪ್ಪರಿಸಿ ಸವಿದರು. ಗಂಡ ಮಗನ ಊಟ ಆಯ್ತು. ಇನ್ನೇನು ಅಂಬವ್ವ ಊಟ ಮಾಡಬೇಕೆಂದು ಸಿದ್ಧ ಮಾಡಿಕೊಳ್ಳುತ್ತಿದ್ದಳು.

'ಏನ ಅಂಬವ್ವ ಏನ ನಡದದ' ಎಂದು ರೇವಣವ್ವ ಒಳಬಂದಳು.

'ಬರ್ರೀ ಚಿಕ್ಕತ್ತಿ ಬರ್ರಿ'

'ತಿಪ್ಪಣ್ಣ ಎಲ್ಲಿ'

'ಇಲ್ಲೇ ಒಳಗದಾರ'

'ಇಲ್ಲೇ ಇದ್ದೀನವ್ವ ಕುರಸಾಲಗಿತ್ತಿ' ಎನ್ನುತ್ತ ಹೊರಬಂದು ಮಾತಾಡಿದ.

'ಮಗ ಬಂದ ಖುಷಿಯೊಳಗ ನೀವಿರಬೇಕಾದ್ರ ನಾನೊಂದು ಶಿವಪೂಜೆಯೊಳಗ ಕರಡಿ ಬಿಟ್ಟಂಗ ಹೌಂದೇನಪಾ' ಎಂದು ರೇವಣವ್ವ ಕೇಳಿದಳು.

'ಏನಜ್ಜಿ ನೀನು ಹಿರಿಯಳಾಗಿ ಹಿಂಗ ಮಾತಾಡಿದ್ರ ಹ್ಯಾಂಗ, ನೀಯೇನ ಹೊರಗಿನಕ್ಕೇನು? ನಮ್ಮಜ್ಜಿ ಇಲ್ಲ ಅನ್ನುವ ಕೊರಗ ದೂರ ಮಾಡಿದವಳು ನೀನು. ನೀ ಬಂದು ಹೋದ್ರ ಈ ಮನಿಗೊಂದು ಕಳಿ ಬರ್ತದ' ಎಂದ ಪ್ರಕಾಶ.

'ಎಷ್ಟು ಮುದ್ದ, ಮುದ್ದಾಗಿ ನನ್ನ ಮಗ ತಿಪ್ಪನಂಗ ಮಾತಾಡ್ತಿಯಲ್ಲೊ! ಅಪ್ಪನ ತದ್ರೂಪ ನೋಡು ಮಾತುಕತಿಯಲ್ಲಿ' ಎಂದು ಲಟಕಿ ಮುರಿದು ಹರಸಿದಳು. ಅಷ್ಟೊತ್ತಿಗೆ ಅಂಬವ್ವ ಎರಡು ತಾಟ ತುಂಬಿಕೊಂಡು ಬಂದಳು.

'ಅತ್ತಿ ಬರ್ರಿ, ಇಬ್ಬರೂ ಊಟಾ ಮಾಡಾನು' ಎಂದು ಕೂಡಿ ಊಟ ಮಾಡಿದರು.

'ತಂಗಿ ಲಗಸೆವ್ವ ಏನ ಮಾಡಾಕ್ಹತ್ಯಾಳ' ಎಂದು ಅಂಬವ್ವ ಕೇಳಿದಳು.

'ಏ ತಾಯಿ...ಯಂಥಾ ವ್ಯಾಳ್ಯಾದಾಗ ಎಂಥವಳ ಹೆಸರ ತಗೀತಿ, ಮುಂದ ನೋಡಿ ಉಣ್ಣು' ಎಂದು ರೇವಣವ್ವ ಸಲಿಗೆಯಿಂದ ಗದರಿದಳು. 'ಹಂಗಂದ್ರ ಹ್ಯಾಂಗ್ ಅತ್ತಿ ಅವಳೂ ನನ್ನ ತಂಗೀನ ಅದಾಳು' ಎಂದು ಅಂಬವ್ವ ಸಮಾಧಾನ ಮಾಡಲು ಯತ್ನಿಸಿದಳು.

'ಅದು ಇರ್ಲಿ ಬಿಡು. ಮಗನ ಬಗ್ಗೆ ಹೇಳು' ಎಂದಳು.

ತನ್ನ ಮಗನ ಬಗ್ಗೆ ಅಂಬವ್ವ ಗುಣಗಾನ ಮಾಡಿದ್ರೆ, 'ನನ್ನ ಮಗಾನು ಏನ ಕಮ್ಮಿ ಇಲ್ಲ ಬಿಡು' ಎಂದು ರೇವಣವ್ವ ಹೇಳುತ್ತಿದ್ದಳು. ಇಬ್ಬರೂ ನಕ್ಕು ಸಂಭ್ರಮಿಸಿದರು.

'ಪ್ರಕಾಶನಿಗೆ ನಾಳಿಗೆ ನೌಕರಿ ಇಂಟರ್‌ವ್ಯೂಗಾಗಿ ಹೋಗ್ತಾನ, ಒಳ್ಳೆ ಸುದ್ದಿ ತಂದ್ರ ಮನಿಗೊಂದು ಆಧಾರ ಅಟ್ಟ ಅಲ್ಲ, ಮನೆತನಕೊಂದು ಗೌರವ ಬಂದಂಗಾಗ್ತದ ಅತ್ತಿ' ಎಂದು ಅಂಬವ್ವ ಹೇಳತಿರಬೇಕಾದರೆ,